ನಾನು ಅಂತಹ ಎಲಗೇಷನ್ ಮಾಡತಕ್ಕ ಪ್ರಯತ್ನವನ್ನು ಮಾಡಲಿಲ್ಲ. ನಾನು ಅಂತಹ ಮನುಷ್ಯನಲ್ಲ. ಕಾರಣವೇನೆಂದರೆ ಮಾನ್ಯ ಶ್ರೀ ಶಿವಪ್ಪನವರ ಬಗ್ಗೆ ಅನುಮಾನ ಪಡತಕ್ಕ ಅವಕಾಶ ಇರಲಿಲ್ಲ. ಅವರು ರಿಪೋರ್ಟ್ ನೋಡಿದೆ ಈ ಮಾತನ್ನು ಹೇಳಿದ್ದಾರೆ. ನಾನು ಆವತ್ತು ಹೇಳಿದ್ದು ಸ್ವೇನ್ ರೆಸ್ ಸ್ಟೀಲ್ ಕೋಟಾವನ್ನು 12 ಜನರಿಗೆ ಹಾನನದಲ್ಲಿ ಕೊಟ್ಟಿದ್ದಾರೆ, 4 ಜನರಿಗೆ ಅರಸೀಕೆರೆಯಲ್ಲಿ ಕೊಟ್ಟಿದ್ದಾರೆ. 3 ಜನರಿಗೆ ಚನ್ನಪಟ್ಟಣದಲ್ಲಿ ಕೊಟ್ಟಿದ್ದಾರೆ. ಅದನ್ನು ಪುಷ್ಟೀಕರಿಸಿ ಇವತ್ತು ನಾನು ಮಾತನಾಡುವುದಕ್ಕೆ ನಿಂತಿದ್ದೇನೆ. ನಾನು ಏನು ಹೇಳಿದ್ದು ಅಂದರೆ, ಅವರಿಗೆ ಕೊಟ್ಟರತಕ್ಕ ಕೋಟಾಗಳು ದುರುಪಯೋಗವಾಗಿವೆ ಎಂಬುದಾಗಿ. ಕೋಟಾ ಕೊಡಬೇಕಾದರೆ, ರ್ಸ್ವೆನ್ಸ್ ಕೊಡಬೇಕಾದರೆ ಒಂದು ಪ್ರೊಸೀಜರ್ ಇದೆ, ಒಂದು ಪದ್ಧತಿ ಇದೆ. ಮೊದಲು ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಕಾಮರ್ಸ್ ಅವರು ಸ್ವೇನ್‌ರೆಸ್ ಷೀಟುಗಳನ್ನು ಉಪಯೋಗಿಸಿ ಅಲ್ಲಿ ಏನೇನು ಮಾಡಬೇಕೋ ಅದನ್ನು ಮಾಡಲು ಅಲ್ಲಿ ಮೆಷನರಿ ಇಟ್ಟಿದ್ದಾರೆಯೇ ಎಂದು ಸರ್ವೆ ಮಾಡಿದ ಮೇಲೆ ಕೋಟಾ ಕೊಡುವುದು ವಾಸ್ತವ. ಆದರೆ ಈಗ ಅವರಿಗೆ ಕೋಟಾ ಕೊಟ್ಟಿರುವುದು ಬೋಗಸ್. ಆದ್ದರಿಂದ ಅದನ್ನು ಜನರು ದುರುಪಯೋಗಪಡಿಸುತ್ತಿದ್ದಾರೆ. ಕಾನೂನಿನಲ್ಲಿರುವ ಹಾಗೆ ನಡೆಯಬೇಕು. ಅದಕ್ಕೆ ಅಡ್ಡಿಯಾಗಿ ನಡೆಯುವುದಕ್ಕೆ ಯಾರಿಗೂ ಅವಕಾಶವಿಲ್ಲ. ಕಾನೂನು ಮೀರಿ ಯಾವುದೇ ವ್ಯವಹಾರ ಮಾಡಬೇಕಾದರೆ ಅಲ್ಲಿ ಲಂಚ ಹೊಡೆಯುತ್ತಿದ್ದಾರೆ, ಅಥವಾ ಇನ್ನು ಯಾರದೋ ಪ್ರಭಾವಕ್ಕೆ ಒಳಗಾಗಿ ಈ ರೀತಿ ಕೊಟ್ಟಿದ್ದಾರೆಂದು ನನಗೆ ಕಾಣುತ್ತದೆ.

ನಾನು ಇವತ್ತೂ ಕೂಡ ಯಾರನ್ನೂ ನವಾಲು ಮಾಡುವುದಕ್ಕೆ ಹೋಗುವುದಿಲ್ಲ. 19 ಜನರಿಗೆ ಸ್ವೇನ್‌ರೆಸ್ ಸ್ಟೀಲ್ ಕೋಟಾವನ್ನು ಕೊಟ್ಟಿದ್ದಾರೆ. ಕೊಟ್ಟಿರುವ ಕೋಟಾವನ್ನು ಇವತ್ತು ನರಿಯಾದ ರೀತಿಯಲ್ಲಿ ಉಪಯೋಗ ಮಾಡಿದ್ದಾರೆಯೇ ಎಂಬುದನ್ನು ಮಾನ್ಯ ಶ್ರೀ ಶಿವಪ್ಪನವರೇ ತನಿಖೆ ನಡೆಸಲಿ, ಮಾನ್ಯ ಶ್ರೀ ಅಪ್ಪಣ್ಣನವರು ನಡೆಸಲಿ. ಎರ್ಡಾದರೂ ಸದುಪಯೋಗವಾಗಿದ್ದರೆ, ನಾನು ರಾಜೀನಾಮೆ ಕೊಡುತ್ತೇನೆ. ದುರುಪಯೋಗವಾಗಿದ್ದರೆ ಅವರು ರಾಜೀನಾಮೆ ಕೊಡಲಿ. ಬೋಗಸ್ ರ್ಸ್ವೆನ್ಸ್ ಕೊಟ್ಟವರ ಮೇಲೆ ಮತ್ತು ಅದನ್ನು ಯಾರು ಸರ್ವೆ ಮಾಡಿದರೋ ಅಂತಹವರ ಮೇಲೆ ತಕ್ಕ ಕ್ರಮ ತೆಗೆದುಕೊಳ್ಳಬೇಕು ಎಂಬುದಾಗಿ ನಾನು ಹೇಳುತ್ತೇನೆ. ಅದನ್ನು ಪ್ರಾಮಾಣಿಕರಾದವರಿಗೆ ಕೊಟ್ಟಿದ್ದರೆ ನಾನು ಬೇಕಾದರೆ ರಾಜೀನಾಮೆ ಕೊಡುತ್ತೇನೆ. ಬೋಗಸ್ ಕೋಟಾ ಕೊಡುವುದಕ್ಕೆ ಯಾರ್ಯಾರು ಕಾರಣಕರ್ತರೋ ಅಂತಹ ಅಧಿಕಾರಿಗಳ ಮೇಲೆ ತಕ್ಕ ಕ್ರಮವನ್ನು ತೆಗೆದುಕೊಳ್ಳಿ. ಮಾನ್ಯ ಶ್ರೀ ಶಿವಪ್ಪನವರೇ ಸರ್ವೆ ಮಾಡಲಿ, ಸೇಕಡ 100 ರಷ್ಟು ನರಿಯೆಂದು ಹೇಳಲಿ, ನಾನು ರಾಜೀನಾಮೆ ಕೊಡುತ್ತೇನೆ.

Notice of Privilege motion by Sri K. H. Patil

ಶ್ರೀ ಕೆ. ಎಚ್. ಪಾಟೀಲ್.—20-3-1970 ನೇ ದಿವಸ ಅಸೆಂಬ್ಲಿಯಲ್ಲಿ ಸಹಕಾರ ವಿಷಯದ ಮೇಲೆ ಚರ್ಚೆಯಾಗುವ ಕಾಲಕ್ಕೆ ಮಾನ್ಯ ಮಂತ್ರಿಗಳಾದ ಶ್ರೀ ಪಿ. ಎಂ. ನಾಡಗೌಡರು ನನ್ನ ಮೇಲೆ ಕೆಲವು ಅಪಾದಾನೆಗಳನ್ನು ಮಾಡಿದರು. ಆ ಅಪಾದಾನೆಗಳು ಕೇವಲ ಅಪಾದಾನೆಗಳು ಅಷ್ಟೇ ಅಲ್ಲ. ಅವು ದೂರಿಪೂರಿತವಾಗಿರುವುದರಿಂದ ಈ ನಥೆಯಲ್ಲ ನನ್ನ ಹಕ್ಕುಬಾಧ್ಯತೆಗೆ ಧಕ್ಕೆ ತಂದಿದ್ದಾರೆ. ಇನ್ನು 177 ನೇ ಕಾಲಂ ಪ್ರಕಾರ ಈಗಾಗಲೇ ನಾನು 21 ನೇ ತಾರೀಖಿನ ದಿವಸ ನೋಟೀಸ್ ಕೊಟ್ಟು ಪ್ರಿವಿಲೇಜ್ ಮೋಷನ್ ಮೂವ್ ಮಾಡಿದ್ದೇನೆ. ನೀವು ಹೇಳಿದ ಮಾತುಗಳು ತಪ್ಪು, ಅವನ್ನು ಇನ್ನೊಮ್ಮೆ ವಿಚಾರಮಾಡಿ, ಪರೀಕ್ಷೆಮಾಡಿ ಮಾತನಾಡಿ ಎಂದು ನಾನು ಎಚ್ಚರಿಕೆ ಕೊಟ್ಟಿದ್ದೇನೆ. 179 ನೇ ನಿಯಮದ ಪ್ರಕಾರ ಅಧ್ಯಕ್ಷರು ಪ್ರಮುಖವಾಗಿ ಒಂದಕ್ಕಿಂತ ಹೆಚ್ಚಿಗೆ ಹಕ್ಕುಬಾಧ್ಯತೆ ಪ್ರಶ್ನೆಗಳು ಬಂದಿವೆಯೇ ಎಂಬುದನ್ನು ನೋಡಬೇಕು. ಇತ್ತೀಚೆಗೆ ಅದರ ಘಟನೆಗಳೇ ಮತ್ತು ಅವು ನಿಜವೇ ಎಂದು ನೋಡಬೇಕು. ಮೂರನೆಯದಾಗಿ ಇಲ್ಲಿ ಮಾತನಾಡಿರುವಂಥ ಮಾತುಗಳು ಕ್ರಿಮಿನರ್ ಇನ್‌ಕ್ರಿಮಿನೇಷನ್ ಆಗಿರುವುದರಿಂದ, ಡಿಫಮೇಷನ್‌ಗೆ ದಾರಿ ಇದ್ದರೂ ಇದನ್ನು ಕಟ್ಟಳೆ ಮಾಡುವುದಕ್ಕೆ ಹಕ್ಕು ಇಲ್ಲದೇ ಇರುವುದರಿಂದ ನನ್ನ ಹಕ್ಕುಬಾಧ್ಯತೆ ನಿರುವಳಿಯನ್ನು ಇಲ್ಲಿ ತರುವುದು ಒಂದೇ ದಾರಿ. ಇಲ್ಲಿ ಶ್ರೀಮಾನ್ ನಾಡಗೌಡರು ಇಲ್ಲದೇ ಇರುವಾಗ ನಾನು ಅದರ ಮೇಲೆ ಅಷ್ಟಾಗಿ ಹೇಳಬೇಕೆಂದು ಅಪೇಕ್ಷೆ ಪಡುವುದಿಲ್ಲ. ಇದನ್ನು ನಾಳೆಯ ದಿನ ವಿಚಾರಮಾಡಲು ಅವಕಾಶ ಕೊಟ್ಟರೆ ನನ ಅಭ್ಯಂತರವಿಲ್ಲ. ಈಗ ತಾವು ಕನ್‌ಸಂಟ್ ಕೊಟ್ಟು ನಾಳೆಯ ದಿನ ಇದನ್ನು ಮೂವ್ ಮಾಡುವುದಕ್ಕೆ ಅವಕಾಶ ಕೊಟ್ಟರೆ ನಾಕು. 25 ಲಕ್ಷ ರೂಪಾಯಿಗಳನ್ನು ನಾನು ಎತ್ತಿಕೊಂಡು ಹೋಗಿದ್ದೇನೆಂದು ಹೇಳಿದರೆ ಹೇಗೆ? ಅಸೆಂಬ್ಲಿ ಮುಗಿದಮೇಲೆ ಅದನ್ನು

(ಶ್ರೀ ಕೆ. ಎಚ್. ಪಾಟೀಲ್)

ಮುರಿಯಬಹುದು, ಇದು ನನ್ನ ಹಕ್ಕಿನ ಪ್ರಶ್ನೆ ಒಂದೇ ಅಲ್ಲ. ಜವಾಬ್ದಾರಿಯಾಗಿ ವರ್ತನೆ ಮಾಡಿದಂಥ ಮಂತ್ರಿಗಳಿಗೆ ಜವಾಬ್ದಾರಿಯುತವಾಗಿ ವರ್ತಿಸುವ ಹಾಗೆ ಮಾತನಾಡುವುದನ್ನು ನಾವು ಕಲಿಸಬೇಕು. ಇವತ್ತಿನ ದಿವಸ ನಾನು ಹಕ್ಕುಬಾಧ್ಯತೆಯ ನಿಲುವಳಿ ಸೂಚನೆಯನ್ನು ಕೊಟ್ಟಮೇಲೆ ಯಾವ್ಯಾವ ದುರಾಚಾರದ ಒತ್ತಾಯಗಳು ಸಹಕಾರಸಂಘಗಳಿಂದ ಬಂದಿವೆಯೋ ಗೊತ್ತಿಲ್ಲ. ಈಗಾಗಲೇ ಅಧಿಕಾರಿಗಳ ಕಡೆಯಿಂದ ಹಿಂದಿನ ತಾರೀಖನ್ನು ಹಾಕಿಸಿ ನಮಗೆ ಸಂತೆಯ ಹುಟ್ಟಿಸುವ ಪ್ರಯತ್ನಗಳು ನಡೆಯುತ್ತಾ ಇವೆ. ಆದ್ದರಿಂದ ನನ್ನ ಈ ಹಕ್ಕು ಬಾಧ್ಯತೆಯ ನಿಲುವಳಿ ಸೂಚನೆಯನ್ನು ತಾವು ತೀವ್ರವಾಗಿ ವಿಚಾರಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

Mr. CHAIRMAN.—It is under the active consideration of the Speaker.

Mysore Electricity (Taxation on Consumption) (Amendment) Bill, 1970

(Introduction.)

Mr. SPEAKER.—I have received the following recommendation of His Excellency the Governor :

> "In pursuance of clause (1) of Article 207 of the Constitution of India, I, Dharma Vira, Governor of Mysore, do hereby recommend that the Mysore Electricity (Taxation on Consumption) (Amendment) Bill, 1970, be introduced in the Mysore Legislative Assembly."

4-30 P.M.

Sri M. NAGAPPA.—On a point of order. Today is fixed for taking up non-official business. The Bill cannot be introduced today because this is Government business. Let them do it on a different day.

Mr. CHAIRMAN.—It is only just introduction. We will take up non-official business.

Sri B. RACHAIAH.—On behalf of the Chief Minister I beg to introduce the Mysore Electricity (Taxation on Consumption) (Amendment) Bill, 1970.

Mr. CHAIRMAN.—The Mysore Electricity (Taxation on Consumption) (Amendment) Bill, 1970 is introduced.

Non-official Resolution *re* : Change of Name of Mysore State as Kannada Nadu

(Debate contd.)

Mr. CHAIRMAN.—This Resolution was previously taken up on 10th September 1968. Now Sri Nanje Gowda may conclude his speech.